ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ದಿನಾಂಕ : 17-10-2014

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | **ವಿಶ್ವ ಆಹಾರ ದಿನಾಚರಣೆ – 2014:**<br><br>ಕುಟುಂಬ ಕೃಷಿಯಿಂದ ವಿಶ್ವದ ಆಹಾರ ಪೂರೈಕೆ ಹಾಗೂ ಭೂಮಿ ರಕ್ಷಣೆ.<br><br>ಉದ್ಘಾಟನೆ:<br><br>ಶ್ರೀ ಭರತ್‌ಲಾಲ್ ಮೀನ,<br>ಪ್ರಧಾನ ಕಾರ್ಯದರ್ಶಿಗಳು,<br>ಕೃಷಿ ಇಲಾಖೆ.<br><br>ಮುಖ್ಯ ಅತಿಥಿ:<br><br>ಡಾ. ಆರ್. ದ್ವಾರಕೀನಾಥ್,<br>ನಿವೃತ್ತ ಕುಲಪತಿಗಳು,<br>ಕೃಷಿ ವಿಶ್ವವಿದ್ಯಾಲಯ,<br>ಬೆಂಗಳೂರು ಹಾಗೂ ಅಧ್ಯಕ್ಷರು, ಎಂ.ಎಂ.ಇ. ಪೌಂಡೇಷನ್, ಬೆಂಗಳೂರು. | 18-10-2014<br>ಶನಿವಾರ<br>ಮಧ್ಯಾಹ್ನ<br>2-00 ಗಂಟೆಗೆ | ಹೆಚ್. ಆರ್. ಅರಕೇರಿ ಸಭಾಂಗಣ,<br>ಕೃಷಿ ತಂತ್ರಜ್ಞರ ಸಂಸ್ಥೆ,<br>ಕ್ವೀನ್ಸ್ ರಸ್ತೆ,<br>ಬೆಂಗಳೂರು – 560 052. |
| 2. | ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷ ಶ್ರೀ ಪಿಚ್ಚಳ್ಳಿ ಶ್ರೀನಿವಾಸ ಅವರಿಂದ 2012-13 ನೇ ಸಾಲಿನ ವಾರ್ಷಿಕ ಅಕಾಡೆಮಿ ಪ್ರಶಸ್ತಿ ಕುರಿತು ಪತ್ರಿಕಾಗೋಷ್ಠಿ. | 18-10-2014<br>ಶನಿವಾರ<br>ಮಧ್ಯಾಹ್ನ<br>2-30 ಗಂಟೆಗೆ | ಅಂತರಂಗ ಸಭಾಂಗಣ,<br>ಕನ್ನಡ ಭವನ<br>ಬೆಂಗಳೂರು. |
| 3. | ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮನೆಯಂಗಳದಲ್ಲಿ ಮಾತುಕತೆ ಸಾಂಸ್ಕೃತಿಕ ಕಾರ್ಯಕ್ರಮ:<br><br>ತಿಂಗಳ ಅತಿಥಿಯಾಗಿ:<br><br>ಸಾಲುಮರದ ತಿಮ್ಮಕ್ಕ<br>ಪರಿಸರವಾದಿ<br><br>ಸಾಂಸ್ಕೃತಿಕ ಕಾರ್ಯಕ್ರಮ:<br><br>ಶ್ರೀ ಕೆ.ಎಂ. ರಾಮಯ್ಯ, ಬೆಂಗಳೂರು ಇವರಿಂದ ತಂಬೂರಿ ವಾದನ. | 18-10-2014<br>ಶನಿವಾರ<br>ಸಂಜೆ<br>4-00 ಗಂಟೆಗೆ | 'ನಯನ ಸಭಾಂಗಣ'<br>ಕನ್ನಡ ಭವನ,<br>ಜೆ.ಸಿ. ರಸ್ತೆ,<br>ಬೆಂಗಳೂರು. |

| | | | |
|---|---|---|---|
| 4. | **Installation Ceremony of his Excellency the Governor of Karnataka as Patron of Bharat Scouts and Guides, Karnataka.**<br><br>**<u>Installated by:</u>**<br><br>**Shri Vajubhai Rudabhai Vala,<br>His Excellency the Governor of Karnataka** | **18-10-2014<br>Saturday<br>at<br>5.00 PM** | **Banquet Hall,<br>Raj Bhavan,<br>Bangalore – 560 001** |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## "ವಿದ್ಯಾಸಿರಿ" ಯೋಜನೆಗೆ ಉತ್ತಮ ಪ್ರತಿಕ್ರಿಯೆ

**ಬೆಂಗಳೂರು, ಅಕ್ಟೋಬರ್ 17 (ಕರ್ನಾಟಕ ವಾರ್ತೆ)**

ಸರ್ಕಾರದ ಮಹತ್ವಕಾಂಕ್ಷೆಯ ಯೋಜನೆಗಳಾದ 'ವಿದ್ಯಾಸಿರಿ' (ಊಟ ಮತ್ತು ವಸತಿ ಸಹಾಯ ಯೋಜನೆ) ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನ ಮತ್ತು ಶುಲ್ಕ ವಿನಾಯಿತ್ತಿ ಕಾರ್ಯಕ್ರಮದ ಅಡಿಯಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ 2014-15 ಸಾಲಿಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಕರೆಯಲಾಗಿತ್ತು. ದಿನಾಂಕ 30-9-2013 ಬೆಳಿಗ್ಗೆ 10.30 ರವರೆಗೆ ಸ್ವೀಕರಿಸಲಾದ ಅರ್ಜಿಗಳ ವಿವರ ಈ ಕೆಳಕಂಡಂತಿದೆ.

ಊಟ ವಸತಿ ಸಹಾಯ ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನಕ್ಕೆ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ-4,41,180. ಶುಲ್ಕ ವಿನಾಯಿತಿಗಾಗಿ ಮಾತ್ರ ಅರ್ಜಿ ಸಲ್ಲಿಸಿದವರು – 9,123. ನವೀಕರಣಕ್ಕಾಗಿ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ 1,35,701 ನವೀಕರಣದಡಿಯಲ್ಲಿ ಶುಲ್ಕ ವಿನಾಯಿತಿಗೆ ಮಾತ್ರ ಅರ್ಜಿ ಸಲ್ಲಿಸಿದವರು – 1043.

2013-14 ನೇ ಸಾಲಿನಲ್ಲಿ ಊಟ ಮತ್ತು ವಸತಿ ಸಹಾಯ ಯೋಜನೆ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಸಲ್ಲಿಸಿದ್ದ ಅರ್ಜಿಗಳ ಸಂಖ್ಯೆ 3,81,899 ಆಗಿತ್ತು ಮತ್ತು ಶುಲ್ಕ ವಿನಾಯಿತಿಗಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ 3,60,824 ಆಗಿತ್ತು.

ಕಳೆದ ಸಾಲಿಗೆ ಹೋಲಿಸಿದಲ್ಲಿ ಪ್ರಸ್ತುತ ಸಾಲಿನಲ್ಲಿ ವಿದ್ಯಾಸಿರಿ ಮತ್ತು ವಿದ್ಯಾರ್ಥಿ ವೇತನ ಮತ್ತು ಶುಲ್ಕ ವಿನಾಯಿತಿಗಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆಯಲ್ಲಿ ಹೆಚ್ಚಳ ಕಂಡು ಬಂದಿರುತ್ತದೆ.

ಕವನ:ಜಿಪಿಆರ್.

## ಬಾಯ್ಲರ್ ಅಟೆಂಡೆಂಟ್ಸ್ ಪರೀಕ್ಷೆಗೆ ಅರ್ಜಿ ಆಹ್ವಾನ

**ಬೆಂಗಳೂರು, ಅಕ್ಟೋಬರ್ 17 (ಕರ್ನಾಟಕ ವಾರ್ತೆ)**

ಪ್ರಥಮ ಮತ್ತು ದ್ವಿತೀಯ ದರ್ಜೆ ಬಾಯ್ಲರ್ ಅಟೆಂಡೆಂಟ್ಸ್ ಪರೀಕ್ಷೆಯನ್ನು ತಾತ್ಕಾಲಿಕವಾಗಿ 2015 ನೇ ಜನವರಿ ತಿಂಗಳಿನಲ್ಲಿ ನಡೆಸಲು ಬಾಯ್ಲರ್ ಅಟೆಂಡೆಂಟ್ ಪರೀಕ್ಷಾ ಮಂಡಳಿಯು ಉದ್ದೇಶಿಸಿದೆ. ಸದರಿ ಪರೀಕ್ಷೆಗೆ ವಿವಿಧ ಜಿಲ್ಲೆಗಳಿಂದ ಬರುವ ಅರ್ಜಿಗಳ ಸಂಖ್ಯೆಯ ಆಧಾರದ ಮೇಲೆ ಪರೀಕ್ಷಾ ಸ್ಥಳ ಮತ್ತು ದಿನಾಂಕವನ್ನು ನಿಗದಿಪಡಿಸಿ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.

ಆಸಕ್ತ ಅಭ್ಯರ್ಥಿಗಳು ಪರೀಕ್ಷೆಯ ಅರ್ಜಿ ಮತ್ತು ಅನುಭಂದ ನಮೂನೆಗಳಿಗಾಗಿ ಮನವಿಯನ್ನು 30-00 ರೂಪಾಯಿಗಳ ಅಂಚೆ ಚೀಟಿ ಹಚ್ಚಿದ ಸ್ವವಿಳಾಸವುಳ್ಳ ಲಕೋಟೆಯನ್ನು ಕಾರ್ಯದರ್ಶಿಗಳು, ಬಾಯ್ಲರ್ ಅಟೆಂಡೆಂಟ್ಸ್ ಪರೀಕ್ಷಾ ಮಂಡಳಿ, ಕಾರ್ಮಿಕ ಭವನ, 2ನೇ ಮಹಡಿ, ಬೆಂಗಲೂರು ಡೈರಿ ವೃತ್ತದ ಬಳಿ ಬನ್ನೇರುಘಟ್ಟ ರಸ್ತೆ, ಬೆಂಗಳೂರು-29 ಇವರಿಗೆ ಸಲ್ಲಿಸಬೇಕು.

ಹೆಚ್ಚಿನ ವಿವರ ಹಾಗೂ ಅರ್ಜಿಯನ್ನು ಡೌನ್‌ಲೋಡ್ ಮಾಡಲು ಇಲಾಖೆಯ ವೆಬ್‌ಸೈಟ್ www.labour.kr.nic.in ಅನ್ನು ಸಂಪರ್ಕಿಸಬಹುದು.

ಕವನ:ಬಿಜಿಪಿ:ಜಿಪಿಆರ್.

## ಮನೆಯಂಗಳದಲ್ಲಿ ಮಾತುಕತೆ – ತಿಂಗಳ ಅತಿಥಿಯಾಗಿ ಪರಿಸರವಾದಿ ಸಾಲುಮರದ ತಿಮ್ಮಕ್ಕ

**ಬೆಂಗಳೂರು, ಅಕ್ಟೋಬರ್ 17 (ಕರ್ನಾಟಕ ವಾರ್ತೆ)**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಅಕ್ಟೋಬರ್ 18 ರ ಶನಿವಾರದಂದು ಸಂಜೆ 4-00 ಗಂಟೆಗೆ ನಗರದ ಜೆ.ಸಿ. ರಸ್ತೆಯಲ್ಲಿರುವ ಕನ್ನಡ ಭವನದ 'ನಯನ ಸಭಾಂಗಣ' ದಲ್ಲಿ ನಡೆಯಲಿರುವ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ಪರಿಸರವಾದಿ ಸಾಲುಮರದ ತಿಮ್ಮಕ್ಕ ಅವರು ತಿಂಗಳ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಅಂದು ಮಧ್ಯಾಹ್ನ 3-00 ಗಂಟೆಯಿಂದ ಬೆಂಗಳೂರಿನ ಶ್ರೀ ಕೆ.ಎಂ. ರಾಮಯ್ಯ ಅವರಿಂದ ತಂಬೂರಿ ವಾದನ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಣೆ ತಿಳಿಸಿದೆ.

ಕವನ:ಜಿಪಿಆರ್.